21. ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿ.	5.04	3 ವರ್ಷಗಳು
22. ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ ನಿ.	4.99	4 ಅಥವಾ ಹೆಚ್ಚು ವರ್ಷಗಳು
23. ಶ್ರೀಕಂಠೀರವ ಸ್ಟುಡಿಯೋಸ್ ನಿಯಮಿತ	4.36	1 ವರ್ಷ
24. ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿ.	1.82	4 ಅಥವಾ ಹೆಚ್ಚು ವರ್ಷಗಳು
25. ಮೈಸೂರು ಮ್ಯಾಚ್ ಕಂ., ನಿ.	1.43	4 "
26. ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿ.	0.16	4 "
ನಷ್ಟ ಅನುಭವಿಸುತ್ತಿರುವ ಉದ್ಯಮಗಳ ಒಟ್ಟು ಮೊತ್ತ	4,945.00	

ಬೆಳಗಾವಿ ಜಿಲ್ಲೆಯಲ್ಲಿ ಹುಟ್ಟುವಳಿ ಮಾರಾಟ ಸಹಕಾರ ಸಂಘದಿಂದ ಸರ್ಕಾರದ ಪ್ರತಿನಿಧಿಯಂತೆ ಸಗಟು ವಿತರಣೆ

1245 (1889): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾವಿ ಜಿಲ್ಲೆಯಲ್ಲಿ ತಾಲ್ಲೂಕು ಹುಟ್ಟುವಳಿ ಮಾರಾಟ ಸಹಕಾರ ಸಂಘಗಳು ಆಹಾರ ಧಾನ್ಯ ಮತ್ತು ಪಾಮ್ ಎಣ್ಣೆ ಹಾಗೂ ಸಕ್ಕರೆ ಮುಂತಾದುವುಗಳನ್ನು ಸರ್ಕಾರದ ಪ್ರತಿನಿಧಿಯಾಗಿ ಸಗಟು ನಾಮಿನಿವತಿಯಿಂದ ವಿತರಣೆ ಮಾಡುತ್ತಿದ್ದ ಸಂಗತಿ ನಿಜವೇ;

ಆ. ಕೇಂದ್ರ ಸರ್ಕಾರದ ಧೋರಣೆಯ ಅನುಸಾರ ಸಗಟು ಮಾರಾಟ ನಾಮಿನಿಗಳು ಜನವರಿ 1990 ರಿಂದ ಸೆಪ್ಟೆಂಬರ್ 1991 ರವರೆಗೆ ಸರ್ಕಾರದ ಆದೇಶದ ಮೇರೆಗೆ ಸಕ್ಕರೆಯನ್ನು ಸರ್ಕಾರ ನಿಗದಿಪಡಿಸಿದ ದರಕ್ಕೆ ಖರೀದಿಸಿ ಕಡಿಮೆ ಬೆಲೆಗೆ ಯೋಗ್ಯ ದರದ ಅಂಗಡಿಗಳಿಗೆ ಪುರವಣಿ ಮಾಡಿದ ಸಂಗತಿ ನಿಜವೇ;

ಇ. ಸದರಿ ಅವಧಿಯ ಸಕ್ಕರೆಯ ಮಾರಾಟವನ್ನು ಬೆಳಗಾವಿ ಜಿಲ್ಲೆಯ ಯಾವ ಯಾವ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘಗಳು ಮಾಡುತ್ತಿದ್ದವು (ಆ ಮಾರಾಟ ಸಂಘಗಳ ಹೆಸರನ್ನು ವಿವರವಾಗಿ ಕೊಡುವುದಾಗಬೇಕು;)

ಈ. ಸದರಿ ಮಾರಾಟ ಸಹಕಾರ ಸಂಘಗಳಿಗೆ ಸರ್ಕಾರದವರು ಜನವರಿ 1990 ರಿಂದ ಸೆಪ್ಟೆಂಬರ್ 1991 ರವರೆಗೆ ಸರ್ಕಾರಿ ಆದೇಶದ ಪ್ರಕಾರ ಸಕ್ಕರೆಯನ್ನು ಕಡಿಮೆ ಹಣದಲ್ಲಿ ಮಾರಾಟ ಮಾಡಿದ ಬಗ್ಗೆ ಎಷ್ಟು ಮರು ಪಾವತಿಗಾಗಿ ಸಂಘಗಳಿಗೆ ಮಾಡಬೇಕಾಗಿದೆ;

ಉ. ಪ್ರತಿಯೊಂದೂ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘಗಳಿಗೆ ಎಷ್ಟು ಹಣವನ್ನು ಈ ಅವಧಿಯಲ್ಲಿ ಸರ್ಕಾರದವರು ಮರು ಪಾವತಿ ಮಾಡಬೇಕಾಗಿದೆ: (ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ವಿವರವನ್ನು ಕೊಡುವುದಾಗಬೇಕು);

ಊ. ಈ ಹಣವನ್ನು ಸರ್ಕಾರದಿಂದ ಸಗಟು ನಾಮಿನಿಗಳಿಗೆ ಮರುಪಾವತಿ ಮಾಡಲಾಗಿದೆಯೋ: ಒಂದು ವೇಳೆ ಮಾಡದೇ ಇದ್ದಲ್ಲಿ, ಇನ್ನು ಎಷ್ಟು ದಿನಗಳಲ್ಲಿ ಮರುಪಾವತಿ ಮಾಡಲಾಗುವುದು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. ಬೆಳಗಾವಿ ಜಿಲ್ಲೆಯ ರಾಮದುರ್ಗ ಮತ್ತು ರಾಯಬಾಗ್ ತಾಲ್ಲೂಕುಗಳನ್ನು ಹೊರತು ಪಡಿಸಿ, ಉಳಿದ ತಾಲ್ಲೂಕುಗಳಲ್ಲಿ ತಾಲ್ಲೂಕು ಹುಟ್ಟುವಳಿ ಮಾರಾಟ ಸಹಕಾರ ಸಂಘ ಸಗಟು ನಾಮಿನಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು.

ಆ. ಹೌದು.

ಇ. ಟಿ.ಎ.ಪಿ.ಸಿ.ಎಂ.ಎಸ್. ನಿಪ್ಪಾಣಿ, ಬೆಳಗಾವಿ, ಗೋಕಾಕ್, ಸಂಕೇಶ್ವರ, ನಂದಗಡ್, ಬೈಲಹೋಂಗಲ, ಸೌಂದತ್ತಿ ಮತ್ತು ಅಥಣಿ.

ಈ. ಸದರಿ ಮಾರಾಟ ಸಹಕಾರ ಸಂಘಗಳಿಗೆ ಈ ಕೆಳಗಿನಂತೆ ಹಣವನ್ನು ಸಂಘಗಳಿಗೆ ಮರುಪಾವತಿ ಮಾಡಬೇಕಾಗಿರುತ್ತದೆ:

ಕ್ರ.ಸಂ.	ಸಂಘಗಳ ಹೆಸರು		ಮೊತ್ತ
1.	ಟಿಎಪಿಸಿಎಂಎಸ್	ಬೆಳಗಾವಿ	4,09,612–74
2.	"	ನಿಪ್ಪಾಣಿ	3,46,684–22
3.	"	ಗೋಕಾಕ್	4,32,442–69
4.	"	ಸಂಕೇಶ್ವರ್	3,33,047–86
5.	"	ನಂದಗಡ್	2,35,736–74
6.	"	ಬೈಲಹೊಂಗಲ	3,50,149–37
7.	"	ಸೌಂದತ್ತಿ	2,50,370–46
8.	"	ಅಥಣಿ	37,543–31

ಉ. ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಊ. ಸದರಿ ಹಣವನ್ನು ಈವರೆಗೆ ಮರು ಪಾವತಿ ಮಾಡಿರುವುದಿಲ್ಲ. ಆದರೆ, ಈ ಬಗ್ಗೆ ಭಾರತ ಸರ್ಕಾರದೊಂದಿಗೆ ವ್ಯವಹರಿಸಲಾಗುತ್ತಿದೆ.

ಸಚಿವಾಯಲದ ಅಧೀನ ಕಾರ್ಯದರ್ಶಿ ಹುದ್ದೆಗೆ ಭಡ್ತಿಯ ನಿಯಮ

1247 (860): ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರದ ಸಚಿವಾಲಯದಲ್ಲಿ ಶಾಖಾಧಿಕಾರಿಯಿಂದ ಅಧೀನ ಕಾರ್ಯದರ್ಶಿ ಹುದ್ದೆಗೆ ಬಡ್ತಿ ಪಡೆಯಲು ಹಾಲಿ ಇದ್ದ 3 ವರ್ಷಗಳ ಸೇವೆಯ ಅವಧಿಯನ್ನು 5 ವರ್ಷಗಳಿಗೆ ವಿಸ್ತರಿಸಿರುವುದು ನಿಜವೇ;

ಆ. ಹಾಗಿದ್ದಲ್ಲಿ ಅದಕ್ಕೆ ಕಾರಣವೇನು;

ಇ. ಇಂತಹ ತಿದ್ದುಪಡಿಯಿಂದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ